ಮಂಜೂರಾಗಿದೆ. ಎಕರೆ ಒಂದಕ್ಕೆ ರೂ.50,000/– ಹಾಗೂ ಇತರೆ ಶುಲ್ಕಗಳನ್ನು ಸರ್ಕಾರಕ್ಕೆ ಜಮಾ ಮಾಡುವ ಷರತ್ತಿನ ಮೇರೆಗೆ ಮಂಜೂರು ಮಾಡಿ ಮಂಡಳಿಗೆ ವರ್ಗಾಯಿಸಲಾಗಿದೆ. ಮಾರುಕಟ್ಟೆ ಬೆಲೆ ಭೂಪರಿವರ್ತನಾ ಶುಲ್ಕ ಮತ್ತು ಪೋಡಿ ಶುಲ್ಕ ಸೇರಿದಂತೆ ಒಟ್ಟು ರೂ.2,76,86,878–00 ಗಳನ್ನು ಶಿವಮೊಗ್ಗ ಜಿಲ್ಲಾಧಿಕಾರಿಗಳ ಪಿ.ಡಿ. ಖಾತೆಗೆ ಜಮಾ ಮಾಡಲಾಗಿದೆ.

ಆ) ನಿಧಿಗೆ ಗ್ರಾಮದ ಸರ್ಕಾರಿ ಸ.ನಂ. 131, 139, 156ರ ಜಮೀನಿನಲ್ಲಿ ಶಾಲೆ, ಮನೆ ಇತ್ಯಾದಿ ಕೈಗಾರಿಕೇತರ ಉದ್ದೇಶಗಳಿಗೆ ಮಂಡಳಿ ವತಿಯಿಂದ ನಿವೇಶನ ಹಂಚಿಕೆ ಮಾಡಿರುವುದಿಲ್ಲ.

ಇ) ಈ ಬಾಬ್ತಿನಲ್ಲಿ ಕೈಗಾರಿಕೇತರ ಉದ್ದೇಶಕ್ಕೆ ನಿವೇಶನ ಮಂಜೂರು ಮಾಡಿರುವುದಿಲ್ಲ. ಹಾಗೂ ಈ ಬಾಬ್ತು ಹಣ ಮಂಡಳಿಗೆ ಜಮಾ ಮಾಡಿಕೊಂಡಿರುವುದಿಲ್ಲ.

ನಿಧಿಗೆ ಗ್ರಾಮದ ಮಾರುಕಟ್ಟೆ ಬೆಲೆ ಎಕರೆ ಒಂದಕ್ಕೆ ಖುಷ್ಕಿ ಜಮೀನಿಗೆ ರೂ. 2.05 ಲಕ್ಷ, ಮಳೆ ಆಧಾರಿತ ಜಮೀನಿಗೆ ರೂ. 2.40 ಲಕ್ಷ, ಕೆರೆ ಪ್ರದೇಶಕ್ಕೆ ರೂ. 2.70 ಲಕ್ಷ, ನಾಲಾ ಪ್ರದೇಶದ ಜಮೀನಿಗೆ ರೂ. 3.40 ಲಕ್ಷದಂತೆ ಉಪ ನೋಂದಣಾಧಿಕಾರಿಗಳ ಕಚೇರಿ ದಾಖಲೆಯಂತೆ ಬೆಲೆ ನಿಗದಿಪಡಿಸಿದೆ.

ತೆರವುಪಡಿಸುವ ಪ್ರಕರಣಗಳು ಯಾವುದು ಇರುವುದಿಲ್ಲ.

307 ಶ್ರೀ ಕುಲಕರ್ಣಿ ಶ್ರೀಕಾಂತ್ ಸುಬ್ಬರಾವ್ (ಜಮಖಂಡಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಮಖಂಡಿ ಪಟ್ಟಣದ ಸಮೀಪದಲ್ಲಿರುವ ಪುನರ್ವಸತಿ ಕೇಂದ್ರಗಳೆಷ್ಟು?

ಆ) ಸದರಿ ಪುನರ್ವಸತಿ ಕೇಂದ್ರಗಳಲ್ಲಿ ಇರುವ ಕೊಳವೆ ಬಾವಿಗಳಲ್ಲಿಯ ನೀರು ಫ್ಲೋರೈಡ್ ಯುಕ್ತವೆನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಜಮಖಂಡಿ ನಗರದ ಕುಡಿಯುವ ನೀರಿನ ಯೋಜನೆಯಾದ ಪುನರ್ವಸತಿ ಕೇಂದ್ರಗಳಿಗೆ ಶುದ್ಧೀಕರಿಸಿದ ನೀರು ಕೊಡುವ ಕಾರ್ಯದ ವಿಳಂಬಕ್ಕೆ ಕಾರಣಗಳೇನು?

ಶ್ರೀ ಜಿ.ಕೆ.ಕರುಣಾಕರ ರೆಡ್ಡಿ (ಕಂದಾಯ ಸಚಿವರು) :

ಅ) 6 ಪುನರ್ವಸತಿ ಕೇಂದ್ರಗಳಿವೆ.

ಆ) 2 ಪುನರ್ವಸತಿ ಕೇಂದ್ರಗಳಲ್ಲಿನ ಕೊಳವೆ ಬಾವಿಗಳಲ್ಲಿ ಸವಳು ನೀರು ಇರುವುದು ಗಮನಕ್ಕೆ ಬಂದು ಈ ಕೇಂದ್ರಗಳಿಗೆ ಇಲಾಖಾ ಟ್ಯಾಂಕರ್ ಮೂಲಕ ಕುಡಿಯುವ ನೀರು ಸರಬರಾಜು ಮಾಡಲಾಗುತ್ತಿದೆ.

ಇ) ಜಮಖಂಡಿ ಪಟ್ಟಣದ 2ನೇ ಹಂತದ ಕುಡಿಯುವ ನೀರು ಯೋಜನೆಯಲ್ಲಿ ಪುನರ್ವಸತಿ ಕೇಂದ್ರಗಳಿಗೆ ಶುದ್ಧೀಕರಿಸಿದ ಕುಡಿಯುವ ನೀರನ್ನು ಒದಗಿಸಲು ರೂ.423 ಲಕ್ಷಗಳ ಅಂದಾಜು ಪಟ್ಟಿ ತಯಾರಿಸಿದ್ದು ಇದನ್ನು ಜಾರಿಗೆ ತರಲು ಕ್ರಮ ಕೈಗೊಳ್ಳಲಾಗುವುದು.

734 ಶ್ರೀ ರಮಾನಾಥ್ ರೈ.ಬಿ (ಬಂಟ್ವಾಳ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪ್ರಸ್ತುತ ವರ್ಷ ರಾಜ್ಯದಲ್ಲಿ ಅಕ್ರಮ-ಸಕ್ರಮ ಸಮಿತಿಗಳನ್ನು ರಚಿಸಲಾಗಿದೆಯೇ;

ಆ) ಹಾಗಿದ್ದಲ್ಲಿ, ಯಾವ ಯಾವ ತಾಲ್ಲೂಕುಗಳಲ್ಲಿ ರಚಿಸಲಾಗಿದೆ; (ವಿವರ ನೀಡುವುದು)

ಇ) ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ವಿಧಾನ ಸಭಾ ಕ್ಷೇತ್ರದಲ್ಲಿ ಅಕ್ರಮ-ಸಕ್ರಮ ಸಮಿತಿ ರಚಿಸದೇ ಇರುವುದರಿಂದ ಈ ಭಾಗದ ರೈತರಿಗೆ ಅನ್ಯಾಯವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಬಂದಿದ್ದಲ್ಲಿ, ಬಂಟ್ವಾಳ ವಿಧಾನ ಸಭಾ ಕ್ಷೇತ್ರದಲ್ಲಿ ಅಕ್ರಮ-ಸಕ್ರಮ ಸಮಿತಿಯನ್ನು ಯಾವಾಗ ರಚಿಸಲಾಗುವುದು?

ಶ್ರೀ ಜಿ.ಕರುಣಾಕರ ರೆಡ್ಡಿ (ಕಂದಾಯ ಸಚಿವರು) :

ಅ) ಹೌದು.

ಆ) ಅನುಬಂಧದಲ್ಲಿ ಲಗತ್ತಿಸಲಾಗಿದೆ.

ಇ) ಕರ್ನಾಟಕ ಭೂ ಕಂದಾಯ ಕಾಯ್ದೆ 94(ಎ) ಮತ್ತು 94(ಬಿ)ರಡಿ ನಮೂನೆ 50, 53ರಲ್ಲಿ ಸಲ್ಲಿಸಿದ ಅರ್ಜಿಗಳನ್ನು ವಿಲೇ ಮಾಡುವ ಅವಧಿಯು ದಿನಾಂಕ: 26.04.2008 ರಂದು ಮುಕ್ತಾಯಗೊಂಡಿರುತ್ತದೆ. ಸರ್ಕಾರವು ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಕಲಂ 94(ಬಿ)ಗೆ ಅಧಿಸೂಚನೆ ಸಂ:ಸಂವ್ಯಶಾಇ 20 ಶಾಸನ 2008 ದಿನಾಂಕ: 15.09.2009